ಮನವ ಶೋಧಿಸಬೇಕು ನಿಚ್ಚ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru, page no. 46.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 332.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 435. The wordings here are similar to Ref. 2 except few differences which are not considered here.
4. **Note:** The lyrics given in Ref. 2 (given without highlights) are almost similar to that of the singer. But the lyrics are slightly different in Ref. 1. They are given separately in green highlights.

ರಾಗ: ನಾದನಾಮಕ್ರಿಯೆ ತಾಳ: ಅಟ್ಟ

ಮನವ ಶೋಧಿಸಬೇಕು ನಿಚ್ಚ ದಿನ	ಮನವ ಶೋಧಿಸಬೇಕು ನಿಚ್ಚ ದಿನ
ದಿನ ಮಾಡುವ ಪಾಪ ಪುಣ್ಯದ ವೆಚ್ಚ ॥ ಪ ॥	ದಿನ ಮಾಡುವ ಪಾಪ ಪುಣ್ಯದ ವೆಚ್ಚ
ಧರ್ಮ ಅಧರ್ಮ ವಿಂಗಡಿಸಿ ಅ-	ಧರ್ಮ ಅಧರ್ಮ ವಿಂಗಡಿಸಿ ದು-
ಧರ್ಮದ ನರಗಳ ಬೇರ ಕತ್ತರಿಸಿ	ಷ್ಕರ್ಮಕೆ ಏರಿದ ಬೇರ ಕತ್ತರಿಸಿ
ನಿರ್ಮಲಾಚಾರದಿ ಚರಿಸಿ ಪರ	ನಿರ್ಮಲಾಚಾರದಿ ಚರಿಸಿ ಪರ
ಬೊಮ್ಮ ಮೂರುತಿ ಪಾದ ಕಮಲವ ಭಜಿಸಿ ॥ ೧ ॥	ಬೊಮ್ಮ ಮೂರುತಿ ಪಾದ ಕಮಲವ ಭಜಿಸಿ
ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ	ತನುವ ದಂಡಿಸಿ ಒಮ್ಮೆ ಮಾಣೊ ನಿನ್ನ
ಮನವ ದಂಡಿಸಿ ಪರಮಾತ್ಮನ್ನ ಕಾಣೋ	ಮನವ ದಂಡಿಸಿ ಪರಮಾತ್ಮನ ಕಾಣೊ
ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ	ನೀನು ನಿನ್ನೊಳಗೆ ಜಾಣನೊ ಮುಕುತಿ
ನಿನಗೆ ದೂರಿಲ್ಲವು ಒಂದೇ ಗೇಣೋ ॥ ೨ ॥	ಏನೂ ದೂರಿಲ್ಲವೊ ಒಂದೇ ಗೇಣೊ
ಆತನ ಭಕುತರಿಗೆ ಕೇಡಿಲ್ಲ ಅವ	ಆತನ ಭಕ್ತರಿಗೆ ಕೇಡಿಲ್ಲ ಅವ
ಪಾತಕ ಪತಿತ ಸಂಗವ ಮಾಡುವನಲ್ಲ	ಪಾತಕ ಪತಿತ ಸಂಗವ ಮಾಡ-ಸಲ್ಲ

ನೀತಿವಂತರು ಕೇಳಿರೆಲ್ಲ ನಮ-
ಗಾತನೆ ಗತಿಯೀವ ಪುರಂದರ ವಿಠಲ ॥ ೩ ॥

ನೀತಿವಂತರು ಕೇಳಿರೆಲ್ಲ ನಮ-
ಗೀತನೆ ಗತಿಯೀವ ಪುರಂದರ ವಿಠಲ

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮನವ ಶೋಧಿಸಬೇಕು ನಿಚ್ಚ = ಅಂತರಂಗ ಶೋಧನೆಯೆಂಬ ವಿವರ. ಅಷ್ಟಾಂಗ ಯೋಗದಲ್ಲಿ ಪ್ರಾಣಾಯಾಮದನಂತರ ವಿಹಿತವಾದ ಪ್ರತ್ಯಾಹಾರ. ಮನಸ್ಸನ್ನು ಇಂದ್ರಿಯಗಳಿಂದ ಸೆಳೆದುಕೊಂಡು ತನ್ನಲ್ಲೇ ಗಮನವನ್ನು ಹರಿಸಿ ಅನುಕೂಲ ಪ್ರತಿಕೂಲ ಪ್ರವೃತ್ತಿಗಳನ್ನು ವಿಂಗಡಿಸಿ ಕೊಂಡು ಹೇಯ-ಹಾನ-ಹಾನೋ ಪಾಯಗಳೆಂಬ ವಿಧಿಯಿಂದ ಮನಸ್ಸನ್ನು ಸಮಾಧಿಗೆ ಉಪಯುಕ್ತವನ್ನಾಗಿ ಮಾರ್ಪಡಿಸಿ ಕೊಳ್ಳುವುದು.

ನಿಚ್ಚ = ನಿತ್ಯ

ಬೊಮ್ಮ ಮೂರುತಿ = ಪರಬ್ರಹ್ಮ, ಬಿಂಬರೂಪ

ತನುವ ಖಂಡಿಸಿ = ದೇಹದ ನೆನಪನ್ನು ಅಳಿಸಿ (ಸಮಾಧಿಯಲ್ಲಿ)

ಮಾಣೋ = ದೇಹ ವ್ಯಾಪಾರವನ್ನು ನಿಲ್ಲಿಸು

ಮಾನವ ದಂಡಿಸಿ = ಮನಸ್ಸಿನ ವಿಷಯ ಪ್ರಾವಣ್ಯವನ್ನು ತಪ್ಪಿಸಿ, ಬಿಗಿ ಹಿಡಿದು.

ಜಾಣೋ = ತಿಳಿದುಕೋ (ಜಾಣ್)

ಮುಕ್ತಿ ಒಂದೇ ಗೇಣೋ = ಬಿಂಬನ ಸ್ಥಾನವು ಹೃದಯ ಕಮಲವಾಗಿದ್ದು, ಪ್ರತಿಬಿಂಬನಾದ ಜೀವನ ಸ್ಥಾನವು ಆಜ್ಞಾ ಚಕ್ರವಾದುದರಿಂದ ಎರಡಕ್ಕೂ ನಡುವೆ ಇರುವ ದೂರ ಒಂದು ಗೇಣು ಅಷ್ಟೇ. ಜೀವನು ಹೃದಯದಲ್ಲಿ ಬಿಂಬಾ ಪರೋಕ್ಷವನ್ನು ಪಡೆದುಕೊಳ್ಳುವುದೇ ಮುಕ್ತಿ.

ಗತಿಯೀವ = ಮುಕ್ತಿಯನ್ನು ನೀಡುವವ.

ಪಾಪ = ವೆಚ್ಚ ..... ಪಾಪ ಮಾಡುವದರಿಂದ ಪುಣ್ಯದಲ್ಲಿ ಕೊರತೆಯಾಗುತ್ತದೆ

ಏರಿದ = ಉಂಟಾದ

ಆಚಾರಾದಿ ಚರಿಸಿ = ಶುಧ್ಧ ನಡತೆಯುಳ್ಳವನಾಗಿ

ನೀನು ನಿನ್ನೊಳಗೆ ಜಾಣನೋ = ಆತ್ಮ ಜ್ಞಾನವನ್ನು ತಾನೆ ಪಡೆಯಬೇಕು. ಬೇರೆಯವರಿಂದ ಅಲ್ಲ.

ಪಾತಕ = ಪಾಪಿ

ಪತಿತ = ಭ್ರಷ್ಟ

Classification: Keerthane
Ankita: purandara vittala
Location: NA
Category: mukti marga, jeevanoddhara, bimba rupa, Aartha Bhava.
Sub-Category: papa, punya, dharma, nara, jiva, Nirmala, parabrahma, mukti, chakra, hrudaya, padma, bimba, pratibimba, paramatma
Pravachana: NA
Explanation: NA